# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 248 (234)
   (ಸಮಾಜ ಕಲ್ಯಾಣ ಇಲಾಖೆಯಿಂದ ವರ್ಗಾವಣೆಗೊಂಡಿರುವ ಪ್ರಶ್ನೆ)
2. ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ
   (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 20.12.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪರಿಶಿಷ್ಟ ಜಾತಿ ವರ್ಗಗಳ ಉದ್ಯಮಿಗಳ ಬೆಳವಣಿಗೆಗೆ ಸರ್ಕಾರವೇ ಅಡ್ಡಗಾಲಾಗಿದ್ದು ವ್ಯಾಜ್ಯ ಇಲ್ಲವೇ ತಕರಾರು ಇರುವ ಭೂಮಿಗಳನ್ನು ಗುರುತಿಸಿ, ಅವುಗಳ ವ್ಯಾಜ್ಯಗಳು ಬಗೆಹರಿಯುವ ವರೆಗೂ ಜಮೀನು ಮಂಜೂರಾಗದೇ ದಲಿತರ ಯೋಜನೆಗಳು ಈಡೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರಾಜ್ಯದಾದ್ಯಂತ ಅಭಿವೃದ್ಧಿಪಡಿಸುತ್ತಿರುವ ಕೈಗಾರಿಕಾ ಪ್ರದೇಶಗಳಲ್ಲಿ ದಿನಾಂಕ: 21.03.2009 ರಿಂದ ಅನ್ವಯವಾಗುವಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಪ್ರದೇಶದ ಶೇಕಡಾ 22.65ರಷ್ಟು ಜಮೀನನ್ನು ಮೀಸಲಿಟ್ಟು ಹಂಚಿಕೆ ಮಾಡಲಾಗಿದೆ.<br><br>ಮುಂದುವರೆದು ದಿನಾಂಕ: 09.06.2022ರಿಂದ ಅನ್ವಯವಾಗುವಂತೆ ಸದರಿ ಮೀಸಲಾತಿಯನ್ನು ಪರಿಷ್ಕರಿಸಿ ಶೇಕಡಾ 24.1ರಷ್ಟು ಹಂಚಿಕೆ ಮಾಡಲಾಗುತ್ತಿದೆ.<br><br>ಕೆ.ಐ.ಎ.ಡಿ.ಬಿ.ಯು ಜಮೀನು ಭೂಸ್ವಾಧೀನಪಡಿಸಿ, ಅಭಿವೃದ್ಧಿಪಡಿಸಿದ ಮೇಲೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನ ಹಂಚಿಕೆ ಮಾಡುತ್ತಿದ್ದು, ಕೆಲವೊಂದು ಪ್ರಕರಣಗಳಲ್ಲಿ ಭೂಮಾಲೀಕರು ಜಮೀನಿನ ಭೂಸ್ವಾಧೀನವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿದ್ದು ಹಾಗೂ ಸರ್ಕಾರಿ ಜಮೀನಿನ |

| | | |
|---|---|---|
| | | ಹಸ್ತಾಂತರದಲ್ಲಿ ವಿಳಂಬವಾದ ಪ್ರಕರಣಗಳಲ್ಲಿ ಸಾಮಾನ್ಯ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರ ಜಮೀನು ಹಂಚಿಕೆಯಲ್ಲಿ ವಿಳಂಬವಾಗಿರುತ್ತದೆ. ಅಂತಹ ಪ್ರಕರಣಗಳಲ್ಲಿ ತಕರಾರು ಬಗೆಹರಿದ ನಂತರ ಹಂಚಿಕೆಯನ್ನು ಮುಂದುವರೆಸಲಾಗುತ್ತದೆ. |
| (ಆ) | ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಈ ಬಗ್ಗೆ ಪತ್ತೆ ಹಚ್ಚಿ ಸಲ್ಲಿಸಿರುವ ವರದಿಯನ್ನು ಸರ್ಕಾರಕ್ಕೆ ನೀಡಲಾಗಿದೆಯೇ: (ಸಂಪೂರ್ಣ ಮಾಹಿತಿಯನ್ನು ನೀಡುವುದು) | 15ನೇ ವಿಧಾನ ಸಭೆಯ 2021-22ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಕಲ್ಯಾಣ ಸಮಿತಿಯ ವರದಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಜಮೀನು ಹಂಚಿಕೆ ಮಾಡುವಾಗ ವ್ಯಾಜ್ಯದಲ್ಲಿರುವ ಭೂಮಿಯನ್ನು ಗುರುತಿಸಿ, ಸದರಿ ವ್ಯಾಜ್ಯಗಳು ಪೂರ್ಣ ಪ್ರಮಾಣದಲ್ಲಿ ಇತ್ಯರ್ಥವಾಗುವವರೆಗೆ ಹಂಚಿಕೆ ಮಾಡದೇ ವಿಳಂಬವಾಗಿರುವುದನ್ನು ಸಮಿತಿಯು ಆಕ್ಷೇಪಿಸಿ, ಇನ್ನು ಮುಂದೆ ವ್ಯಾಜ್ಯರಹಿತ ಭೂಮಿಯನ್ನು ಯಾವುದೇ ವಿಳಂಬ ಮಾಡದೇ ಹಂಚಿಕೆ ಮಾಡುವಂತೆ ಸಮಿತಿಯು ಸೂಚಿಸಿರುತ್ತದೆ. ಅದರಂತೆ ವ್ಯಾಜ್ಯ ರಹಿತ ಭೂಮಿಯನ್ನು ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತಿದೆ. |
| (ಇ) | ಈ ವರದಿಯಂತೆ ಪರಿಶಿಷ್ಟ ಜಾತಿ, ವರ್ಗಗಳ ಕೈಗಾರಿಕೋದ್ಯಮಿಗಳ ಏಳಿಗೆಗಳಿಗೆ ವಿರುದ್ಧವಾಗಿರುವರನ್ನು ಪತ್ತೆ ಹಚ್ಚಲು ತನಿಖೆಗೆ ಆದೇಶಿಸಲಾಗಿದೆಯೇ? | ಸದರಿ ವರದಿಯಲ್ಲಿ ತನಿಖೆಗೆ ನಿರ್ದೇಶನ ನೀಡಿರುವುದಿಲ್ಲ. |

ಸಂಖ್ಯೆ: ಸಿಐ 336 ಐಎಪಿ (ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)